SEVA BHARATHI
सेवा ही परमो धर्मः

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)
ಮಾಸಿಕ e-ನ್ಯೂಸ್ ಲೆಟರ್ – ಜನವರಿ 2025

ಸಂಪುಟ : 06
ಸಂಚಿಕೆ : 01

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಕುಮಟಾ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ 28ನೇ ವಸತಿಯುತ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ



## ಉಜಿರೆಯಲ್ಲಿ 98ನೇ ಬೃಹತ್ ರಕ್ತದಾನ ಶಿಬಿರ

## 30ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ

## ಉದ್ಯೋಗಕ್ಕೆ ಮತ್ತೆ ಕೈಹಿಡಿದ ಎಳೆನೀರು ವ್ಯಾಪಾರ – ಬೆನ್ನುಹುರಿ ಅಪಘಾತಕ್ಕೊಳಗಾದ ದಯಾನಂದ ಕೊಡ್ಲಿಪೇಟೆಯವರ

ಯಶೋಗಾಥೆ

Mob. : 99454 91241 | E-mail: sevabharathikanyady@gmail.com | Website: www.sevaabharathi.org

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಎರಡು ದಿನಗಳ ಆರೋಗ್ಯ ತಪಾಸಣಾ ಜಾಗೃತಿ ಶಿಬಿರವು ಉತ್ತರಕನ್ನಡ ಜಿಲ್ಲೆಯ ಕುಮಟಾದ ಕೆನರಾ ಹೆಲ್ತ್‌ಕೇರ್ ಸೆಂಟರ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ಡಾ. ಗಣೇಶ್ ಗಣಪತಿ ಹೆಗ್ಡೆ ಮತ್ತು ಡಾ. ಸುರೇಶ ಹೆಗ್ಡೆ, ಮೋಹನ್ ಗುನಗಾ ಹಾಗೂ ಲಯನ್ಸ್ ಕ್ಲಬ್‌ನ ಸಹಭಾಗಿತ್ವದಲ್ಲಿ ಅನೇಕ ಸಹೃದಯೀ ಕೊಡುಗೈ ದಾನಿಗಳ ಸಹಕಾರದಲ್ಲಿ ನಡೆದ ಶಿಬಿರದಲ್ಲಿ 13 ಮಂದಿ ಫಲಾನುಭವಿಗಳು ಭಾಗವಹಿಸಿದ್ದರು.

ಒಬ್ಬ ಜನಪರ ಪ್ರತಿನಿಧಿಯಾಗಿ ಶಾಸಕರಾದ ದಿನಕರ ಕೆ. ಶೆಟ್ಟಿಯವರು ಸಂಸ್ಥೆಯ ಕಾರ್ಯಚಟುವಟಿಕೆಗಳಿಗೆ ಶುಭಹಾರೈಸಿ ಸಂಸ್ಥೆಯ ಬೆಳವಣಿಗೆಗೆ ಕೈಜೋಡಿಸುತ್ತೇನೆ ಎಂದು ತನ್ನ ಕ್ಷೇತ್ರದ ದಿವ್ಯಾಂಗರ ಬಗ್ಗೆ ಕಾಳಜಿ ವಹಿಸುವೆನೆಂದು ವಿಶ್ವಾಸಭರಿತ ನುಡಿಗಳನ್ನಾಡಿದರು. ಇದೇ ಶಿಬಿರದಲ್ಲಿ ಸ್ಥಳೀಯ ಗ್ರಾಮೀಣ ಪುನಶ್ಚೇತನ ಕಾರ್ಯಕರ್ತರು (VRW) ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) ಬೆನ್ನುಹುರಿ ಅಪಘಾತ ಹಾಗೂ ಅದರ ನಿರ್ವಹಣೆ ಕಾರ್ಯಾಗಾರದಲ್ಲೂ ಭಾಗವಹಿಸಿರುವುದು ಉಲ್ಲೇಖನೀಯ ವಿಚಾರ.

ಉಜಿರೆಯಲ್ಲಿ ಗೌಡರ ಯಾನೆ ಒಕ್ಕಲಿಗರ ಸಂಘದ ಆಶ್ರಯದಲ್ಲಿ ನಡೆದ 98ನೇ ರಕ್ತದಾನ ಶಿಬಿರದಲ್ಲಿ 123 ಮಂದಿ ಭಾಗವಹಿಸಿ ರಕ್ತ ನೀಡಿರುವುದು ಸಂತೋಷಕರ. ಶಿಬಿರಕ್ಕೆ ಸ್ಥಳೀಯ ಸಂಘಸಂಸ್ಥೆಗಳು ಸಹಭಾಗಿತ್ವ ನೀಡಿದ್ದವು.

ಬೆಳ್ತಂಗಡಿ ತಾಲೂಕಿನ ಅರಸಿನಮಕ್ಕಿ ನಾವಳೆಯಲ್ಲಿ ಸ್ಥಳೀಯ ಮಹಿಳೆಯರ ಅಪೇಕ್ಷೆಯಂತೆ ಟೈಲರಿಂಗ್ ತರಬೇತಿಯು ಪ್ರಾರಂಭಗೊಂಡಿತು. ಇದು ಕೂಡ ಯಶಸ್ಸು ಕಾಣುತ್ತಿರುವುದು ಭಾಗವಹಿಸಿದ ಶಿಬಿರಾರ್ಥಿಗಳೇ 23ಕ್ಕೂ ಹೆಚ್ಚಿರುವುದರಿಂದ ತಿಳಿಯ ಬಹುದು.

ಈ ಮೊದಲು ಶಿಶಿಲದಲ್ಲಿ ನಡೆದ ಶಿಬಿರದ ಶಿಕ್ಷಕಿಯಾಗಿದ್ದ ವಿನಯ ಶೆಂಡ್ಯೆಯವರು ಸೇವಾಭಾರತಿಯಿಂದ ಪಡೆದ ಸಂಭಾವನೆಯನ್ನು ದೇಣಿಗೆ ರೂಪದಲ್ಲಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ನೀಡಿರುವುದಲ್ಲದೆ, ಶಿಬಿರಾರ್ಥಿಗಳೊಂದಿಗೆ ಸೇವಾಧಾಮಕ್ಕೆ ಆಗಮಿಸಿದ್ದರಿಂದಲೂ ಧನ ಸಹಾಯ ನೀಡಲು ಪ್ರೇರೇಪಿಸಿರುವ ಒಂದು ಪ್ರೇರಣಾ ಸಂಗತಿ ಎಲ್ಲರಿಗೂ ಅನುಕರಣೀಯ.

'ಸೇವೆಯೇ ಪರಮಧರ್ಮ'

ವಂದನೆಗಳೊಂದಿಗೆ

ಇತೀ ತಮ್ಮವ

ಕೆ. ವಿನಾಯಕ ರಾವ್



## ನಮ್ಮ ವಿಳಾಸ

### ಪ್ರಧಾನ ಕಚೇರಿ :

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

### ಸೇವಾ ಕೇಂದ್ರ :

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888



## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯ ಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ 28ನೇ ವಸತಿಯುತ
# ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರ










ಸೇವಾಭಾರತಿ–ಸೇವಾಧಾಮ, ಉತ್ತರ ಕನ್ನಡ ಜಿಲ್ಲೆ ಇದರ ಆಶ್ರಯದಲ್ಲಿ ಕೆನರಾ ಹೆಲ್ತ್ ಕೇರ್ ಸೆಂಟರ್, ಕುಮಟಾ ಮತ್ತು ಲಯನ್ಸ್ ಕ್ಲಬ್ ಕುಮಟಾ ಇವುಗಳ ಸಹಯೋಗದಲ್ಲಿ ಬೆನ್ನುಹುರಿ ಅಪಘಾತ ಕ್ಕೊಳಗಾದವರಿಗಾಗಿ ವಸತಿಯುತ 28ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರದ ಉದ್ಘಾಟನಾ ಸಮಾರಂಭವು ಜನವರಿ 24 ರಂದು ಲಯನ್ಸ್ ಕ್ಲಬ್ ಕುಮಟಾದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಕುಮಟಾ ಮತ್ತು ಹೊನ್ನಾವರ ತಾಲೂಕಿನ ಮಾನ್ಯ ಶಾಸಕರಾದ ಶ್ರೀ ದಿನಕರ ಕೆ. ಶೆಟ್ಟಿ ಉದ್ಘಾಟಿಸಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಮತ್ತು ಡಾಕ್ಟರ್ಸ್‌ಗಳಿಂದ ಸಂಪೂರ್ಣ ಸಹಕಾರವನ್ನು ನೀಡುವ ಹಾಗೆ ಮಾಡುತ್ತೇನೆ ಎಂದು ಉದ್ಘಾಟಕರ ನುಡಿಗಳನ್ನಾಡಿದರು.

ಸೇವಾಭಾರತಿ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಮಾತನಾಡಿ ಕೆನರಾ ಹೆಲ್ತ್ ಸೆಂಟರ್‌ನಲ್ಲಿ 3 ವರ್ಷಗಳಿಂದ ನಮಗೆ ಉಚಿತವಾಗಿ ಶಿಬಿರವನ್ನು ನಡೆಸಿಕೊಡಲು ನಮಗೆ ಸಂಪೂರ್ಣ ಸಹಕಾರವನ್ನು ಮಾಡಿಕೊಟ್ಟಿದ್ದೀರಾ ಎಂದು ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಕುಮಟಾ ಕೆನರಾ ಹೆಲ್ತ್‌ಕೇರ್ ಸೆಂಟರ್‌ನ ಅಧ್ಯಕ್ಷರಾದ ಡಾ. ಗಣೇಶ್ ಗಣಪತಿಹೆಗ್ಡೆ, ಲಯನ್ಸ್ ಕ್ಲಬ್ ಕುಮಟಾ ಅಧ್ಯಕ್ಷರಾದ ಲ। ಮಂಗಳ ಬಿ. ನಾಯಕ್, ಕೆನರಾ ಹೆಲ್ತ್ ಸೆಂಟರ್‌ನ ಜನರಲ್ ಸರ್ಜನ್ ಡಾ. ಸಚ್ಚಿದಾನಂದ ನಾಯಕ್, ಕುಮಟಾ ಡೆಂಟಲ್ ಸರ್ಜನ್ ಡಾ. ಸುರೇಶ ಹೆಗ್ಡೆ, ಸೇವಾಭಾರತಿಯ ಶಿರ್ಸಿ ವಿಭಾಗ ಪ್ರಮುಖರಾದ ಶ್ರೀ ಮೋಹನ್ ಗುನಗಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್‌ನ್ನು ಒದಗಿಸುವ ಬಗ್ಗೆ, ಮಾಸಾಸನ ರೂ. 5,000/– ಕ್ಕೆ ಹೆಚ್ಚಿಸುವಂತೆ, ಚೈತನ್ಯ ಗಾಲಿಕುರ್ಚಿಯನ್ನು ಒದಗಿಸುವಂತೆ ಮತ್ತು ಆರೈಕೆದಾರರಿಗೆ ಭತ್ಯೆ ನೀಡುವ ಹಾಗೆ ಆಯಾ ಇಲಾಖೆಗಳಿಗೆ ಶಿಫಾರಸ್ಸು ಮಾಡಬೇಕೆಂದು ಕುಮಟಾ ಮತ್ತು ಹೊನ್ನಾವರ ತಾಲೂಕಿನ ಮಾನ್ಯ ಶಾಸಕರಾದ ಶ್ರೀ ದಿನಕರ ಕೆ. ಶೆಟ್ಟಿ ಅವರಿಗೆ ಮನವಿಯನ್ನು ಮಾಡಲಾಯಿತು. ಒಟ್ಟು 13 ಮಂದಿ ಶಿಬಿರಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಸೇವಾಧಾಮ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಉತ್ತರಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಸುಧಾಕರ್ ಸ್ವಾಗತಿಸಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ. ಕಾರ್ಯಕ್ರಮವನ್ನು ನಿರೂಪಿಸಿ, ಉಡುಪಿ ಜಿಲ್ಲೆಯ ಕ್ಷೇತ್ರಸಂಯೋಜಕರಾದ ಶ್ರೀ ಮನೋಜ್ ಶೆಟ್ಟಿ ಧನ್ಯವಾದವಿತ್ತರು.

*Abled does not mean enabled. Disabled does not mean less abled*

# ಉಜಿರೆಯಲ್ಲಿ 98ನೇ ಬೃಹತ್ ರಕ್ತದಾನ ಶಿಬಿರ






ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ (ರಿ.) ಉಜಿರೆ ಇವರ ನೇತೃತ್ವದಲ್ಲಿ ರೋಟರಿ ಕ್ಲಬ್ ಬೆಳ್ತಂಗಡಿ, ಸೇವಾಭಾರತಿ (ರಿ.), ಕನ್ಯಾಡಿ ಕೆ.ಎಂ.ಸಿ. ಬ್ಲಡ್‌ಬ್ಯಾಂಕ್, ಮಂಗಳೂರು ಇವರ ಸಹಯೋಗದೊಂದಿಗೆ ಜನವರಿ 12 ರಂದು ಬೃಹತ್ ರಕ್ತದಾನ ಶಿಬಿರವು ಉಜಿರೆ ಶಾರದಾ ಮಂಟಪದಲ್ಲಿ ಜರುಗಿತು.

ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಅನುವಂಶಿಕ ಆಡಳಿತ ಮೊಕ್ತೇಸರರು ಶ್ರೀ ಶರತ್‌ಕೃಷ್ಣ ಪಡುವೆಟ್ನಾಯ ಇವರು ಉದ್ಘಾಟಿಸಿ, ರಕ್ತದಾನ ಮಾಡುವುದು ಒಂದು ಮಹತ್ತರವಾದ ಕಾರ್ಯ ಹಲವು ಸಂಘಟನೆಗಳ ಸಹಕಾರದಲ್ಲಿ ನಡೆಸುತ್ತಿರುವ ಈ ರಕ್ತದಾನ ಶಿಬಿರ ಮಾದರಿಯಾಗಿದೆ ರಕ್ತದಾನದ ಮೂಲಕ ನೀವೆಲ್ಲರು ಪುಣ್ಯದ ಕೆಲಸ ಮಾಡುತ್ತಿದ್ದೀರಿ' ಎಂದು ಶುಭಹಾರೈಸಿದರು.

ರೋಟರಿ ಕ್ಲಬ್ ಬೆಳ್ತಂಗಡಿ ಅಧ್ಯಕ್ಷರಾದ ರೋ। ಪೂರನ್ ವರ್ಮ, ಉಜರೆ ಗೌಡರ ಯಾನೆ ಒಕ್ಕಲಿಗರ ಸೇವಾಸಮಿತಿ (ರಿ.), ಅಧ್ಯಕ್ಷರಾದ ಧರ್ಣಪ್ಪಗೌಡ, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ(ರಿ.), ಗೌರವಾಧ್ಯಕ್ಷರಾದ ಶ್ರೀ ಪ್ರಕಾಶ್ ಗೌಡ, ಅಪ್ರಮೇಯ, ಬೆಳ್ತಂಗಡಿ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷರಾದ ಶ್ರೀ ಶ್ರೀಧರ ಕೆ.ವಿ., ಸೇವಾಧಾಮ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದ ಯಶಸ್ಸಿಗೆ ಬೆಳ್ತಂಗಡಿ ತಾಲೂಕು ಔಷಧಿ ವ್ಯಾಪಾರಸ್ಥರ ಸಂಘ, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ ಯುವ ವೇದಿಕೆ, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ ಮಹಿಳಾ ವೇದಿಕೆ, ಉಜಿರೆ ಶ್ರೀ ಶಾರದಾ ಸೇವಾ ಟ್ರಸ್ಟ್ (ರಿ.), ಉಜಿರೆ ಪ್ರಗತಿ ಮಹಿಳಾ ಮಂಡಲ (ರಿ.), ಕಿರಿಯಾಡಿ ಶ್ರೀ ಉಮಾ ಮಹೇಶ್ವರ ಭಜನಾ ಮಂಡಳಿ, ಬೆಳಾಲು ಗೌಡರ ಯಾನೆ ಒಕ್ಕಲಿಗರ ಸೇವಾ ಸಂಘ ಗ್ರಾಮ ಸಮಿತಿ, ಉಜಿರೆ ವಿವೇಕಾನಂದ ನಗರ ಸರಸ್ವತಿ ಭಜನಾ ಮಂಡಳಿ, ವಿಶ್ವಕರ್ಮ ಸಹಕಾರ ಬ್ಯಾಂಕ್, ಉಜಿರೆ ಶಾಖೆ, ಬೆಳ್ತಂಗಡಿ ಕೂಟ ಮಹಾಜಗತ್ತು ಅಂಗ ಸಂಸ್ಥೆ, ನಿಡ್ಲೆ ವನದುರ್ಗಾ ಸ್ಪೋರ್ಟ್ಸ್ ಕ್ಲಬ್, ಬರೆಂಗಾಯ ಓಡಲ ಉಜಿರೆ ಚಾಮುಂಡಿಬೆಟ್ಟ ಶಿವಪಾರ್ವತಿ ಮಹಿಳಾ ಭಜನಾ ಮಂಡಳಿ, ಗಾಂಧಿನಗರ ಭಕ್ತ ಕುಂಬಾರರ ಸಂಘ, ಉಜಿರೆ ಭಾರತ್ ಆಟೋ ಕಾರ್ಸ್ ಪ್ರೈ. ಲಿ., ಮೂಲಾರ್ ಪರಶುರಾಮ ಫ್ರೆಂಡ್ಸ್, ಉಜಿರೆ ಹವ್ಯಕ ವಲಯ, ಮಾಚಾರು ಪ್ರಗತಿ ಯುವಕ ಮಂಡಲ (ರಿ.), ಬೆಳ್ತಂಗಡಿ ರೋಟರಿ ಕ್ಲಬ್, ಸುಜ್ಞಾನ ನಿಧಿ ಯೋಜನೆ, ಬದನಾಜೆ ಶಾಲೆ, ವಿಶಾಲ್ ಸೇವಾ ಟ್ರಸ್ಟ್ ಉಜಿರೆ (ರಿ.) ನಾರ್ಯ ಎರ್ಮುಂಜೆ ಬೈಲು ಗೌಡರ ಯಾನೆ ಒಕ್ಕಲಿಗರ ಸೇವಾ ಸಂಘ ಗ್ರಾಮ ಸಮಿತಿ, ಅರಳಿ ಮಿತ್ರ ಯುವಕ ಮಂಡಲ, ಓಡಲ ಚಾಮುಂಡಿಬೆಟ್ಟ ಶಿವ ಪಾರ್ವತಿ ಮಹಿಳಾ ಭಜನಾ ಮಂಡಳಿ, ಬೆಳಾಲು ಡಿ.ಪಿ. ಸ್ಪೋರ್ಟ್ಸ್ ಕ್ಲಬ್ ಸಹಕರಿಸಿದ್ದಾರೆ.

ಕಾರ್ಯಕ್ರಮದಲ್ಲಿ ಶಿಕ್ಷಕರಾದ ರಮೇಶ್ ಪೈ ಸ್ವಾಗತಿಸಿ, ಸಿ.ಆರ್.ಪಿ. ವಾರಿಜ ನಿರೂಪಿಸಿ, ಉಜಿರೆ ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ(ರಿ.), ಕಾರ್ಯದರ್ಶಿ ಶೇಖರ ಗೌಡ ಉಜಿರೆ ಧನ್ಯವಾದವಿತ್ತರು. ಒಟ್ಟು 123 ಯುನಿಟ್ ರಕ್ತ ಸಂಗ್ರಹಣೆಯಾಯಿತು.




## LIC ತಂಡದಿಂದ ಸೇವಾಧಾಮಕ್ಕೆ ಭೇಟಿ

ಬೆಂಗಳೂರು ಝೋನಲ್ ಸೆಕ್ಷನ್ ವಿಭಾಗದಿಂದ ಶ್ರೀ ಮೋಹನ ಕಾರಂತ್ ಮತ್ತು ಬೆಳ್ತಂಗಡಿ ಶಾಖಾ ವ್ಯವಸ್ಥಾಪಕರು, ಎಸ್.ವಿ. ಕುಮಾರ್‌ರವರು ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಜನವರಿ 9 ರಂದು ಸೋಲಾರ್ ಪ್ರಾಜೆಕ್ಟ್‌ನ ಪರಿಶೀಲನಾ ಉದ್ದೇಶಕ್ಕಾಗಿ ಭೇಟಿ ನೀಡಿ ಸನಿವಾಸಿಗಳೊಂದಿಗೆ ಚರ್ಚಿಸಿ ಆರೋಗ್ಯ ವಾಗಿ ಚೇತರಿಸಿಕೊಳ್ಳುವಂತೆ ಹಾರೈಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಫಂಡ್ ರೈಸಿಂಗ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಸಿ.ಪಿ, ಫಿಸಿಯೋಥೆರಪಿಸ್ಟ್ ಗಣೇಶ್ ಕಾರ್ತಿಕ್, ಅಕೌಂಟೆಂಟ್ ಕು. ಅಕ್ಷತಾ, ಅಸಿಸ್ಟೆಂಟ್ ಥೆರಪಿಸ್ಟ್ ವಿರೂಪಾಕ್ಷಿ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಮತ್ತು ಆರೈಕೆದಾರರು ಉಪಸ್ಥಿತರಿದ್ದರು.

*I dont need easy, I just need possible*

## ಸೇವಾನಿಧಿ ದಾನಿಗಳು

ಶ್ರೀ ಬಾಲಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ವಿ. ಎಸ್. ಕಲಾಚಾರಿ, ಬೆಂಗಳೂರು
ಶ್ರೀಮತಿ ದಿವ್ಯಾ ಪುರಂದರ
ಶ್ರೀ ಸುರೇಶ್, ಬೆಂಗಳೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಕೆ. ಪುರಂದರ ರಾವ್, ಕನ್ಯಾಡಿ ॥
ಶ್ರೀ ಸುರೇಂದ್ರ ಕುಡುವ, ಉಜಿರೆ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ ॥
ಶ್ರೀ ಪುರುಷೋತ್ತಮ ಡಿ.ಎ., ಧರ್ಮಸ್ಥಳ
ಶ್ರೀ ಕೆ. ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಕಾರ್ತಿಕ್ ಕೆ. ನೇತ್ರಾವತಿ
ಮಾಸ್ಟರ್ ರಾಹುಲ್ ಪ್ರಭು, ಕನ್ಯಾಡಿ
ಶ್ರೀ ಅವಿನಾಶ್ ಶೆಟ್ಟಿ, ನೇತ್ರಾವತಿ
ಡಾ. ರಾಮಕೃಷ್ಣ ಭಟ್ ಜಿ.ಎಸ್, ಕನ್ಯಾಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ಬಾಲಕೃಷ್ಣ ರಾವ್ ಕೆ., ಕನ್ಯಾಡಿ
ಶ್ರೀ ಮಧುಸೂದನ, ಉಜಿರೆ
ಶ್ರೀ ಅಶ್ರಫ್, ಲಾಯಿಲ
ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀಮತಿ ಜಯಂತಿ ಪುರಂದರ
ಶ್ರೀ ಕೆ. ಸೂರ್ಯನಾರಾಯಣ ರಾವ್
ಶ್ರೀ ಸುನಿಲ್ ಪಿ.ಎನ್, ಧರ್ಮಸ್ಥಳ
ಹೋಟೆಲ್ ಬಾಂಬೆಡೈನ್, ಉಜಿರೆ
ಶ್ರೀ ಶ್ರೀಧರ ಕೆ.ವಿ., ಉಜಿರೆ
ಶ್ರೀ ಶೆಲ್ಡನ್ ಲೆನ್ಸಲೆಟ್ಮೊನಿಸ್, ಬೆಳ್ತಂಗಡಿ
ಶ್ರೀ ಕೆ. ರಮೇಶ್ ಪೂಜಾರಿ
ಶ್ರೀಮತಿ ಸವಿತಾ ಎಂ. ರಾವ್, ಕನ್ಯಾಡಿ
ಶ್ರೀ ಶಿವ ಕುಮಾರ, ಉಜಿರೆ
ಶ್ರೀ ರಮೇಶ್ ಗೌಡ, ಉಜಿರೆ
ಕು. ಸಂತೃಪ್ತಿ ಆರ್ ಫಡ್ಕೆ, ಬೆಳ್ತಂಗಡಿ
ಶ್ರೀ ಅರ್ಜುನ್ ಸಿ., ಶಿವಮೊಗ್ಗ
ಶ್ರೀ ಸುಹಾಸ್ ಲೆಕ್ಕಡಿ, ಸುಳ್ಯ
ಶ್ರೀ ರಜತ್ ಕುಮರ್ ಜಿ.ಡಿ., ಬೆಳ್ತಂಗಡಿ
ಶ್ರೀ ಸುನಿಲ್ ಕುಮಾರ್ ಜೈನ್, ಧರ್ಮಸ್ಥಳ
ಬೇಬಿ ಶ್ರೀ ಬಿಲ್ವನಿ, ಉಜಿರೆ
ಶ್ರೀ ಜಿ. ಪುಟ್ಟಸ್ವಾಮಿ, ಉಜಿರೆ
ಶ್ರೀ ಸಂತೋಷ್ ಕೆ., ಕೊಕ್ಕಡ
ಶ್ರೀ ಪ್ರಿಜೇಶ್, ಧರ್ಮಸ್ಥಳ
ಶ್ರೀ ಜಯಾನಂದ ಎಂ.

## ದೇಣಿಗೆ ನೀಡಿದ ಸಂಘ ಸಂಸ್ಥೆಗಳು

ಯುವಜನ ಸೇವಾ ಸಂಘ, ಕಟಪಾಡಿ
ಲಯನ್ಸ್ ಕ್ಲಬ್, ಕುಮಟಾ

## ವಸ್ತು ರೂಪದಲ್ಲಿ ದೇಣಿಗೆ ನೀಡಿದವರು

ಅದಮ್ಯ ಚೇತನ, ಬೆಂಗಳೂರು
ಉಜಿರೆ ಹವ್ಯಕ ವಲಯ, ಉಜಿರೆ
ಲಯನ್ಸ್ ಕ್ಲಬ್, ಸಕಲೇಶಪುರ

## ಮಹನೀಯ ದಾನಿಗಳು

ಶ್ರೀಮತಿ ಕಾವ್ಯಾರಾಣಿ ಭಟ್, ಮಂಗಳೂರು
ಶ್ರೀ ಗುರುಪ್ರಸಾದ್ ಟಿ., ಬೆಳ್ತಂಗಡಿ
ಅಗಸ್ತ್ಯ ಮತ್ತು ಗೀತಾಂಜಲಿ, ಬೆಳ್ತಂಗಡಿ
ಕು। ಜ್ಯೋತಿ ಎಂ. ಪೂಜಾರಿ, ಉತ್ತರಕನ್ನಡ
ಮಾಸ್ಟರ್ ನಿತಿನ್ ಪ್ರದೀಪ್, ಮಂಗಳೂರು
ಶ್ರೀಮತಿ ಚಂದ್ರಿಕಾ ರಾಜಾರಾಮ್, ಬೆಂಗಳೂರು
ಶ್ರೀ ಗೌರಿಶಂಕರ ರಾವ್, ಧರ್ಮಸ್ಥಳ
ಶ್ರೀ ಸೂರಜ್ ಕಲ್ಲೂರಾಯ, ಬೆಳ್ತಂಗಡಿ
ಶ್ರೀ ದಾಮೋದರ ದೊಂಡೋಲೆ, ಬೆಳ್ತಂಗಡಿ
ಶ್ರೀ ಎಂ. ಎಸ್ ಭಂಡಾರ್ಕರ್, ಉಡುಪಿ
ಶ್ರೀಮತಿ ವಿನಯ ಶೆಂಡ್ಯೆ, ಶಿಬಾಜೆ
29ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ, ಶಿಶಿಲ
ಶ್ರೀ ಗೋಪಾಲಕೃಷ್ಣ, ಬೆಂಗಳೂರು
ಶ್ರೀ ಪ್ರಕಾಶ್ ಟಿ., ಮಂಗಳೂರು
ಶ್ರೀ ಬಸವರಾಜ್, ದಾವಣಗೆರೆ
ಶ್ರೀ ವಿ. ಗೋಪಾಲಕೃಷ್ಣಯ್ಯ, ಬೆಂಗಳೂರು
ಶ್ರೀಮತಿ ಆರ್. ಶ್ರದ್ಧಾ, ಮುಂಬೈ
ಶ್ರೀ ರಿತಿಕ್, ಮಂಗಳೂರು
ಶ್ರೀ ದಿನಕರ ಶೆಟ್ಟಿ, MLA ಕುಮಟಾ ಮತ್ತು ಹೊನ್ನಾವರ
ಶ್ರೀ ವಿಷ್ಣುವೆಂಕಟರಮಣ ಭಟ್, ಹೊನ್ನಾವರ
ಶ್ರೀ ಮುರಳೀಧರ್ ವಿ.ಪ್ರಭು, ಕುಮಟಾ
ಶ್ರೀ ಅರುಣ್ ಕಾಮತ್, ಕುಮಟಾ
ಡಾ. ಸತೀಶ್ ವಾಮನ ಪ್ರಭು, ಕುಮಟಾ
ಶ್ರೀ ವಿನಾಯಕ ಶ್ರೀಧರ ಹೆಗ್ಡೆ, ಕುಮಟಾ
ಶ್ರೀ ದೇವಿದಾಸ ದಟ್ಟಶೆಟ್, ಕುಮಟಾ
ಡಾ. ವಿ.ಆರ್. ನಾಯಕ್, ಕುಮಟಾ
ಶ್ರೀ ಸುಬ್ರಾಯ ವಿಷ್ಣು ಭಟ್, ಬೆಂಗಳೂರು
ಶ್ರೀಮತಿ ಬಿಂದುಶ್ರೀ, ಉಡುಪಿ

## ಜನವರಿ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ | – 6 |
| 2. | ನೀರಿನ ಹಾಸಿಗೆ | – 2 |
| 3. | ಗಾಳಿಯ ಹಾಸಿಗೆ | – 1 |
| 4. | ಸೆಲ್ಫ್‌ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ | – 61 |
| 5. | ಮಂಚ | – 1 |

*The world worries about disability more than disabled people do*

# 30ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ






ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ, ಸಬಲಿನಿ ಯೋಜನೆಯಡಿ ಶೌರ್ಯ ವಿಪತ್ತು ನಿರ್ವಹಣಾ ಘಟಕ ಅರಸಿನಮಕ್ಕಿ–ಶಿಶಿಲ ಇದರ ಸಹಭಾಗಿತ್ವದೊಂದಿಗೆ ಮಹಿಳೆಯರಿಗಾಗಿ 30 ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಅರಸಿನಮಕ್ಕಿ, ಅಂಗನವಾಡಿ ಕೇಂದ್ರ, ನಾವಳೆ– ಪಾಲೆಂಜದಲ್ಲಿ ಜನವರಿ 14 ರಂದು ನಡೆಯಿತು.

ಅರಸಿನಮಕ್ಕಿ ಸಮಾಜ ಸೇವಕರಾದ ಶ್ರೀ ಧರ್ಮರಾಜ ಗೌಡ ಅಡ್ಕಾಡಿ ಮಹಿಳೆಯರು ತನ್ನ ಕಾಲಮೇಲೆ ನಿಂತುಕೊಂಡು ಸ್ವಾವಲಂಬಿಯಾಗಿ ಬದುಕು ನಡೆಸಬೇಕೆಂದು ಶಿಬಿರಾರ್ಥಿಗಳಿಗೆ ಶುಭಹಾರೈಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷೆ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ ಇದರ ಸಿಇಒ ಶ್ರೀಮತಿ ಸ್ವರ್ಣಗೌರಿ ಟೈಲರಿಂಗ್ ಕಲಿಯುವುದರಿಂದ ಬೇರೆಬೇರೆ ರೀತಿಯ ಸ್ವ – ಉದ್ಯೋಗದ ಅವಕಾಶವಿರುತ್ತದೆ. ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರು ಯಾರಿಗೂ ಅವಲಂಬಿತವಾಗದೆ ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯವೆಂದು ತಿಳಿಸಿದರು.

ಅರಿಕೆಗುಡ್ಡೆ ಜೀರ್ಣೋದ್ಧಾರ ಸಮಿತಿ ಶ್ರೀ ವನದುರ್ಗ ದೇವಸ್ಥಾನದ ಅಧ್ಯಕ್ಷರಾದ ಶ್ರೀ ಪ್ರಕಾಶ್ ಪಿಲಿಕಬೆ, ಅರಸಿನಮಕ್ಕಿ ಹತ್ಯಡ್ಕ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ (ನಿ.), ಮಾಜಿ ಅಧ್ಯಕ್ಷರು ಹಾಗೂ ನೂತನ ಹಾಲಿ ಸದಸ್ಯರಾದ ಶ್ರೀ ರಾಘವೇಂದ್ರ ನಾಯಕ್ ಬರ್ಗುಳ, ಅರಸಿನಮಕ್ಕಿ ಬಿಜೆಪಿ ಶಕ್ತಿ ಕೇಂದ್ರ ಅಧ್ಯಕ್ಷರಾದ ಶ್ರೀ ಜಯಪ್ರಸಾದ್ ಶೆಟ್ಟಿಗಾರ್, ಕನ್ಯಾಡಿ ಶ್ರೀ ದುರ್ಗಾ ಮಾತೃಮಂಡಳಿ ಅಧ್ಯಕ್ಷರಾದ ಶ್ರೀಮತಿ ಶಾಂತ ಪಿ. ಶೆಟ್ಟಿ, ಅರಿಕೆಗುಡ್ಡೆ ಶ್ರೀ ವನದುರ್ಗ ದೇವಸ್ಥಾನದ ಮಹಿಳಾ ಕಾರ್ಯದರ್ಶಿ ಶ್ರೀಮತಿ ನೀತಾರಾಧೇ ಆಚಾರ್ಯ, ನಾವಳೆ– ಪಾಲೆಂಜ ಬಾಲ ವಿಕಾಸ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ಕೇಶಾವತಿ, ನಾವಳೆ ಟೈಲರಿಂಗ್ ತರಬೇತಿದಾರರಾದ ಶ್ರೀಮತಿ ವಿಮಲ ಆರ್. ಶೆಟ್ಟಿ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 23 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಪೂರ್ಣಿಮಾ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಶನ್ ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀಮತಿ ನಮಿತಾ ಧನ್ಯವಾದವಿತ್ತರು.



## ಕುಮಟಾದಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಗಾರ

ಸೇವಾಭಾರತಿ –ಸೇವಾಧಾಮದ ವತಿಯಿಂದ ಲಯನ್ಸ್ ಕ್ಲಬ್ ಕುಮಟಾದಲ್ಲಿ ಲಯನ್ಸ್ ಕ್ಲಬ್ ಸದಸ್ಯರಿಗೆ ಕಾರ್ಯಾಗಾರವನ್ನು ಜನವರಿ 22 ರಂದು ಆಯೋಜಿಸ ಲಾಯಿತು. ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಒಟ್ಟು 14 ಮಂದಿ ಲಯನ್ಸ್ ಕ್ಲಬ್ ಸದಸ್ಯರು ಜಾಗೃತಿ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. ಉತ್ತರಕನ್ನಡ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಸುಧಾಕರ್ ಉಪಸ್ಥಿತರಿದ್ದರು.

*Life would be tragic if it weren't funny*

# ಕುಮಟಾ ಲಯನ್ಸ್ ಕ್ಲಬ್‌ನಿಂದ ಧನಸಹಾಯ



ಕುಮಟಾ ತಾಲೂಕಿನಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಜನವರಿ 24 ರಂದು ನಡೆದ ವಸತಿಯುತ 28ನೇ ಉಚಿತ ಆರೋಗ್ಯ ತಪಾಸಣೆ ಹಾಗೂ ಜಾಗೃತಿ ಶಿಬಿರದಲ್ಲಿ ಲಯನ್ಸ್ ಕ್ಲಬ್ ಕುಮಟಾ ಇದರ ಅಧ್ಯಕ್ಷರಾದ ಲI ಮಂಗಳ ಬಿ. ನಾಯಕ್ ಮತ್ತು ಲಯನ್ಸ್ ಕ್ಲಬ್‌ನ ಖಜಾಂಚಿ ಲI ಎಂ. ಎನ್ ಹೆಗ್ಡೆ ಇವರು ಸೇವಾಧಾಮ ಮಾಡುವ ಕಾರ್ಯ ಚಟುವಟಿಕೆಗಳಿಗೆ ರೂ. 6,000 ದ ಚೆಕ್ ನೀಡಿ ಶುಭಹಾರೈಸಿದರು.

ಸೇವಾಭಾರತಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಮತ್ತು ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಅದನ್ನು ಸಿಬ್ಬಂದಿಯೊಂದಿಗೆ ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

# ಲೈನ್‌ಮ್ಯಾನ್‌ಗಳಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಾಗಾರ




ಸೇವಾಭಾರತಿ – ಸೇವಾಧಾಮ ಸಂಸ್ಥೆಯ ಹಾಸನ ಮತ್ತು ಚಿಕ್ಕಮಗಳೂರು ಕ್ಷೇತ್ರ ಸಂಯೋಜಕರಾದ ಶ್ರೀ ನಾಗಾರ್ಜುನ ಡಿ. ಎಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತವನ್ನು ತಡೆಯಲು ಮುನ್ನೆಚ್ಚರಿಕೆ ಮತ್ತು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ಮೂಡಿಗೆರೆಯ ವಿದ್ಯುತ್ ಸರಬರಾಜು ಕಂಪನಿಯ (MESCOM) 2 ಮಂದಿ ಆಫೀಸರ್‌ಗೆ ಮತ್ತು 13 ಮಂದಿ ಲೈನ್‌ಮ್ಯಾನ್‌ಗಳಿಗೆ ಜನವರಿ 30ರಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಸ್ವಯಂಸೇವಕರಾದ ಶ್ರೀ ಜನಾರ್ಧನ ಮೂಡಿಗೆರೆ ಉಪಸ್ಥಿತರಿದ್ದರು.

# ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ




ಜನವರಿ ತಿಂಗಳ ಸೇವಾಸಂಗಮ ಆನ್ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಆದರ್ಶ ಎಂ.ಜೆ. ಬೆಂಗಳೂರಿನ ಅಸೋಸಿಯೇಷನ್ ಪೀಪಲ್ ವಿಥ್ ಡಿಸೆಬಿಲಿಟಿ (APD) ಫಿಸಿಯೋಥೆರಪಿಸ್ಟ್ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ವಿವಿಧ ವ್ಯಾಯಾಮಗಳು ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 55 ಮಂದಿ ಭಾಗವಹಿಸಿದ್ದರು.

# ಸಕಲೇಶಪುರದಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಗಾರ





ಸೇವಾಭಾರತಿ –ಸೇವಾಧಾಮದ ವತಿಯಿಂದ ಲಯನ್ಸ್ ಕ್ಲಬ್ ಸಕಲೇಶಪುರದಲ್ಲಿ ಲಯನ್ಸ್ ಕ್ಲಬ್ ಸದಸ್ಯರಿಗೆ ಕಾರ್ಯಾಗಾರವನ್ನು ಜನವರಿ 11 ರಂದು ಆಯೋಜಿಸಲಾಯಿತು.

ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಒಟ್ಟು 25 ಲಯನ್ಸ್ ಕ್ಲಬ್‌ನ ಸದಸ್ಯರು ಜಾಗೃತಿ ಕಾರ್ಯಗಾರದಲ್ಲಿ ಭಾಗವಹಿಸಿದ್ದರು. ವಸ್ತುರೂಪದಲ್ಲಿ ದೇಣಿಗೆಯಾಗಿ 3 ವಾಕರ್‌ನ್ನು ಸಂಸ್ಥೆಯ ಫಲಾನುಭವಿಗಳಿಗೆ ನೀಡಿರುತ್ತಾರೆ.

ದಕ್ಷಿಣಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ ಮತ್ತು ಸಂಸ್ಥೆಯ ಸ್ವಯಂಸೇವಕರಾದ ಶ್ರೀ ಜಯರಾಜ್ ಉಪಸ್ಥಿತರಿದ್ದರು.

# ಸಮುದಾಯದಲ್ಲಿ ಬೆನ್ನುಹುರಿ ಅಪಘಾತದ ಬಗ್ಗೆ ಜಾಗೃತಿ ಕಾರ್ಯಗಾರ



ಸೇವಾಭಾರತಿ – ಸೇವಾಧಾಮ ಸಂಸ್ಥೆಯ ಕ್ಷೇತ್ರ ಸಂಯೋಜಕರಾದ ಶ್ರೀ ನಾಗಾರ್ಜುನ ಡಿ.ಎ. ಜನವರಿ 17 ರಂದು ಬೆನ್ನುಹುರಿ ಅಪಘಾತ ಮತ್ತು ದ್ವಿತೀಯಾಂತರ ಸಮಸ್ಯೆಗಳು ಹಾಗೂ ಬೆನ್ನುಹುರಿ ಅಪಘಾತ ತಡೆಯಲು ಮುನ್ನೆಚ್ಚರಿಕೆ ಕ್ರಮ ಮತ್ತು ಮರ ಹತ್ತುವಾಗ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳುವುದರ ಬಗ್ಗೆ ಮೂಡಿಗೆರೆಯಲ್ಲಿ 12 ಮಂದಿ ಮರ ಹತ್ತುವ ಕೆಲಸಮಾಡುವವರಿಗೆ ಮಾಹಿತಿ ನೀಡಿದರು.

# ಸೇವಾಧಾಮಕ್ಕೆ ಭೇಟಿ



ಕೊಕ್ಕಡದ ಶ್ರೀಮತಿ ಗಾಯತ್ರಿ ಹಾಗೂ ಕುಟುಂಬಸ್ಥರು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಜನವರಿ 9 ರಂದು ಭೇಟಿ ನೀಡಿ ಸನಿವಾಸಿಗಳಿಗೆ ಒಂದು ಹೊತ್ತಿನ ಊಟವನ್ನು ನೀಡಿ ಸಹಕರಿಸಿದ್ದಾರೆ. ಈ ಸಂದರ್ಭದಲ್ಲಿ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.




ಬೆಂಗಳೂರಿನ ಶ್ರೀ ನಿರಂಜನ್ ಹಾಗೂ ಕುಟುಂಬಸ್ಥರು ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಜನವರಿ 27 ರಂದು ಭೇಟಿ ನೀಡಿ ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ಶುಭಹಾರೈಸಿದರು. ಈ ಸಂದರ್ಭದಲ್ಲಿ ಫಂಡ್ ರೈಸಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್ ಪಿ. ಉಪಸ್ಥಿತರಿದ್ದರು.

*When everyone else says you can’t determination says, YES YOU CAN’*

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು


ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಮಾ। ಅದ್ವಿತ್ ಕೆ.,
ಮಂಗಳೂರು



ಅರ್ಜುನ್,
ತೀರ್ಥಹಳ್ಳಿ



ಶ್ರೀ ಅವಿನಾಶ್ ಶೆಟ್ಟಿ,
ನೇತ್ರಾವತಿ



ಶ್ರೀ ಚರಿತ್ ಕುಮಾರ್ ಎಂ.,
ಪುತ್ತೂರು



ಶ್ರೀ ದಾಮೋದರ,
ದೊಂಡೋಲೆ



ಶ್ರೀಮತಿ ದಿವ್ಯ ಪುರಂದರ,
ಬೆಂಗಳೂರು



ಶ್ರೀ ಡಿ.ಎನ್. ಗಿರೀಶ್
ಧರ್ಮಸ್ಥಳ



ಶ್ರೀ ಗುರುಪ್ರಸಾದ್ ಟಿ.,
ಬೆಳ್ತಂಗಡಿ



ಕು। ಜ್ಯೋತಿ ಎಂ. ಪೂಜಾರಿ,
ಶಿರಸಿ



ಶ್ರೀಮತಿ ಜ್ಯೋತಿಲಕ್ಷ್ಮಿ ಎನ್,
ಕಿಲ್ಲೂರು



ಶ್ರೀಮತಿ ಮಂಜುಳಾ ವಿ.
ಪ್ರಸಾದ್, ಉಡುಪಿ



ಶ್ರೀ ನಿತಿನ್ ಪ್ರದೀಪ್,
ಮಂಗಳೂರು



ಶ್ರೀ ಪ್ರೀಜೇಶ್, ಧರ್ಮಸ್ಥಳ



ಶ್ರೀ ರಾಜೇಶ್ ಫಡ್ಕೆ,
ಬೆಂಗಳೂರು



ಶ್ರೀ ಯಶವಂತ್
ಪಟವರ್ಧನ್

## ಟೈಲರಿಂಗ್ ಶಿಬಿರಾರ್ಥಿಗಳಿಂದ ಸೇವಾಧಾಮಕ್ಕೆ ಭೇಟಿ



ಕೊಕ್ಕಡದಲ್ಲಿ ನಡೆದ 29ನೇ ಟೈಲರಿಂಗ್ ಶಿಬಿರದ ತರಬೇತುದಾರರಾದ ಶ್ರೀಮತಿ ವಿನಯ ಶೆಂಡ್ಯೆ ಮತ್ತು ಎಲ್ಲಾ ಶಿಬಿರಾರ್ಥಿಗಳು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರಕ್ಕೆ ಜನವರಿ 16 ರಂದು ಭೇಟಿನೀಡಿ, ಸೇವಾಧಾಮ ಮಾಡುವ ಕಾರ್ಯಚಟುವಟಿಕೆಗಳಿಗೆ ಶ್ರೀಮತಿ ವಿನಯ ಶೆಂಡ್ಯೆ ರೂ. 5,000 ಮೊತ್ತವನ್ನು ಮತ್ತು ಎಲ್ಲಾ ಶಿಬಿರಾರ್ಥಿಗಳು ರೂ. 1,150 ಮೊತ್ತವನ್ನು ನೀಡಿ ಸಹಕರಿಸಿದ್ದಾರೆ.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಭಾರತಿಯಾದ ನಾನು ಸುಳ್ಯ ತಾಲೂಕು ನೆಲ್ಲಿಕಾರು ಕೆಮ್ಮಾಜೆ ಗ್ರಾಮದಲ್ಲಿ ವಾಸವಾಗಿದ್ದು ಗೃಹಿಣಿಯಾಗಿರುತ್ತೇನೆ. ಆಗಸ್ಟ್ 3 ರಂದು ದನಗಳಿಗೆ ಸೊಪ್ಪು ತರಲು ಹೋಗಿ ಬರುವಾಗ ಮಧ್ಯಾಹ್ನ 12 ಗಂಟೆಗೆ ಕಾಂಕ್ರೀಟ್ ರಸ್ತೆಯಲ್ಲಿ ಕಾಲುಜಾರಿ ಬಿದ್ದಿರುತ್ತೇನೆ. ನಂತರ ನನ್ನ ಪತಿಯವರಾದ ಅನಂತರಾಮ ನನ್ನನ್ನು ಪುತ್ತೂರು ಹಿತಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಿರುತ್ತಾರೆ. ಒಂದು ವಾರಗಳ ಕಾಲ ಅಲ್ಲೇ ಚಿಕಿತ್ಸೆ ನೀಡಿ ನಂತರ ಪುತ್ತೂರು ಸರಕಾರಿ ಆಸ್ಪತ್ರೆಯಲ್ಲಿ 38 ದಿನಗಳ ಕಾಲ ಥೆರಪಿ ಚಿಕಿತ್ಸೆ ನೀಡಿರುತ್ತಾರೆ. ಸೆಪ್ಟೆಂಬರ್ 18ನೇ ತಾರೀಕಿನಂದು ನನ್ನ ಪತಿಯವರಾದ ಅನಂತರರಾಮ ನನ್ನನ್ನು ಸೇವಾಧಾಮ ಥೆರಪಿ ಕೇಂದ್ರಕ್ಕೆ ಕರೆದುಕೊಂಡು ಬಂದು ಸೇರಿಸಿದರು. ಇಲ್ಲಿಗೆ ಬಂದ ಹೊಸತರಲ್ಲಿ ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ಕಷ್ಟವಾಯಿತು. ಇಲ್ಲಿನ ಸಿಬ್ಬಂದಿಗಳ ಸಹಕಾರದಿಂದ ಎಲ್ಲವೂ ಸಾಧ್ಯವಾಯಿತು. ಇಲ್ಲಿನ ಚಿಕಿತ್ಸೆ ಬಗ್ಗೆ ಹೇಳುವುದಾದರೆ ಅದ್ಭುತ ಅಂತಾನೆ ಹೇಳಲು ಬಯಸುತ್ತೇನೆ. ನಾನು ಇಲ್ಲಿಗೆ ಬಂದ ಹೊಸತರಲ್ಲಿ ನನಗೆ ಕೈಕಾಲು ಚಲನೆಯಲ್ಲಿ ಇರಲಿಲ್ಲ. ನಿರಂತರ ಇಲ್ಲಿನ ಯೋಗ, ಥೆರಪಿ ಚಿಕಿತ್ಸೆ ನನ್ನನ್ನು ನನ್ನ ಸ್ವಂತ ಬಲದಿಂದ ನಡೆದಾಡುವಂತೆ ಮಾಡಿದೆ. ಅದಕ್ಕೆ ಇಲ್ಲಿನ ಸಿಬ್ಬಂದಿ ವರ್ಗದವರ ಸಹಕಾರ ತುಂಬಾ ಇರುತ್ತದೆ. ಮುಖ್ಯವಾಗಿ ಇಲ್ಲಿನ ಸಿಬ್ಬಂದಿಯವರಾದ ಗಣೇಶ್ ಸರ್, ಕೃತಿಕಾ ಮೇಡಂ ವಿರೂಪಾಕ್ಷಿ ಸರ್ ಮತ್ತು ನನ್ನನ್ನು ನನ್ನ ಸಹೋದರಿಯಂತೆ ನೋಡಿದ ಸಹಾಯಕಿ ಹಿತಾಕ್ಷಿಯವರಿಗೆ ತುಂಬಾ ಆಭಾರಿಯಾಗಿದ್ದೇನೆ. ಸೇವಾಧಾಮ ಸಂಸ್ಥೆಯ ಎಲ್ಲಾ ಸಿಬ್ಬಂದಿವರ್ಗದವರಿಗೆ ನನ್ನ ತುಂಬುಹೃದಯದ ಧನ್ಯವಾದಗಳನ್ನು ಬಯಸುತ್ತೇನೆ. ಈ ಸಂಸ್ಥೆಗೆ ಎಂದಿಗೂ ಚಿರಋಣಿಯಾಗಿರುತ್ತೇನೆ.

ಇತಿ ನಿಮ್ಮ ವಿಶ್ವಾಸಿ
**ಭಾರತಿ**

## APD ಸಹಕಾರದೊಂದಿಗೆ ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀ ರವಿ ಪ್ರಸಾದ್
ಸುಳ್ಯ



ಶ್ರೀ ರತ್ನಾಕರ ಆಚಾರ್ಯ
ಉಡುಪಿ



ಶ್ರೀ ಬಿ.ಎಂ.ಚನ್ನಕೇಶವ,
ಚಿಕ್ಕಮಗಳೂರು



ಶ್ರೀ ಅರುಣ ಬಂಗಾರ್ಯ
ಚೆನ್ನಯ್ಯ, ಸಿದ್ದಾಪುರ



ಶ್ರೀ ಪ್ರವೀಣ್,
ಮಂಗಳೂರು

## ಸ್ವ–ಉದ್ಯೋಗಕ್ಕೆ ಬೆಂಬಲ




ಶ್ರೀ ವಸಂತ ಮುಗೇರ, ಬೆಳ್ತಂಗಡಿ

# ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ 3 ತಿಂಗಳ ಪುನಶ್ಚೇತನವನ್ನು ಪಡೆದುಕೊಂಡು ಜನವರಿ ತಿಂಗಳಲ್ಲಿ ಮನೆಗೆ ತೆರಳಿದವರು





ಶ್ರೀ ಶೈನಿತ್ ಕೆ. ಪೂಜಾರಿ, ಕೊಯ್ಯುರು



ಶ್ರೀ ಶೇಖರ್, ಸವಣೂರು







ಶ್ರೀ ರಿತಿಕ್, ಮಂಗಳೂರು

## ಉಚಿತವಾಗಿ ಮಂಚ ವಿತರಣೆ

ಬ್ರಹ್ಮಾವರ ತಾಲೂಕಿನ ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀ ವೆಂಕಟೇಶ ಮಾಬುಕೊಲ ಇವರಿಗೆ ಗುರುರಾಜ್ ಇತ್ರಾಡಿ ಇವರು ಉಚಿತವಾಗಿ ಮಂಚ ನೀಡಿ ಸಹಕರಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕಿನ ನಿವೃತ್ತಿ ಆಫೀಸರ್ ಶ್ರೀ ಕೃಷ್ಣ ಪೈ, ಭಾರತಿ ವಿಕಾಸ ಪರಿಷತ್‌ನ ಶ್ರೀ ವಸಂತ ಭಟ್ ಮತ್ತು ಸೇವಾಭಾರತಿ ಟ್ರಸ್ಟಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ ಕ್ಷೇತ್ರ ಸಂಯೋಜಕರಾದ ಶ್ರೀ ಮನೋಜ್ ಶೆಟ್ಟಿ ಉಪಸ್ಥಿತರಿದ್ದರು.



## ನಿಮಗಿದು ತಿಳಿದಿರಲಿ

### ಇಂದ್ರಿಯಗಳು ಮತ್ತು ಗ್ರಹಿಕೆ

1. **ಬೆರಳಚ್ಚುಗಳು:** ಯಾವುದೇ ಇಬ್ಬರು ವ್ಯಕ್ತಿಗಳು ಒಂದೇ ರೀತಿಯ ಬೆರಳಚ್ಚುಗಳನ್ನು ಹೊಂದಿರುವುದಿಲ್ಲ, ಒಂದೇ ರೀತಿಯ ಅವಳಿಗಳೂ ಸಹ.
2. **ಟಂಗ್‌ಪ್ರಿಂಟ್:** ಫಿಂಗರ್ ಪ್ರಿಂಟ್‌ಗಳಂತೆಯೇ, ಪ್ರತಿಯೊಬ್ಬ ವ್ಯಕ್ತಿಯ ನಾಲಿಗೆಯ ಮುದ್ರಣವು ವಿಶಿಷ್ಟವಾಗಿದೆ.
3. **ಹೃದಯ ಬಡಿತಗಳು:** ಮಾನವನ ಹೃದಯವು ಜೀವಿತಾವಧಿಯಲ್ಲಿ ಸುಮಾರು 3 ಬಿಲಿಯನ್ ಬಾರಿ ಬಡಿಯುತ್ತದೆ

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

#### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

### Support us for constructions of Rehabilitation Centre

A/c Name : Sevabharathi
A/c No : 139322010000383
IFSC : UBIN0913936
Account Type : Savings Account
Union Bank of India, UJIRE Branch

*We are put in situations to build our character... not destroy us*

# ಉದ್ಯೋಗಕ್ಕೆ ಮತ್ತೆ ಕೈಹಿಡಿದ ಎಳನೀರು ವ್ಯಾಪಾರ – ಬೆನ್ನುಹುರಿ ಅಪಘಾತಕ್ಕೊಳಗಾದ ದಯಾನಂದ ಕೊಡ್ಲಿಪೇಟೆಯವರ ಯಶೋಗಾಥೆ



**ದಯಾನಂದ** ಕೊಡ್ಲಿಪೇಟೆ ಇವರು ಮೂಲತಃ ಕೊಡುಗು ಜಿಲ್ಲೆಯ, ಸೋಮವಾರಪೇಟೆ ತಾಲೂಕಿನ ಕೊಡ್ಲಿಪೇಟೆ ನಿವಾಸಿ. ಮಾರ್ಚ್ 12, 1994 ರಲ್ಲಿ ದ್ವಿತೀಯ ಪುತ್ರನಾಗಿ ದಿ। ಮಂಜಯ್ಯ ಮತ್ತು ಶ್ರೀಮತಿ ಗೌರಮ್ಮ ದಂಪತಿಯ ಪುತ್ರರಾಗಿ ಜನಿಸಿದರು. GMP ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ತದನಂತರ ಪ್ರೌಢ ಶಿಕ್ಷಣವನ್ನು ಸರಕಾರಿ ಶಾಲೆ ಯಸಳೂರಿನಲ್ಲಿ ಪೂರ್ಣಗೊಳಿಸಿದರು. ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ಆಸೆಯಿದ್ದ ದಯಾನಂದ ಅವರು ತನ್ನ ತಂದೆಯ ಅಕಾಲಿಕ ಮರಣದಿಂದ ಶಿಕ್ಷಣದ ಆಸೆಯನ್ನು ಕೈಬಿಟ್ಟರು ಹಾಗೇ ಮನೆಯಲ್ಲಿ ಬಡತನವಿದ್ದ ಕಾರಣ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗದೆ ಬೆಂಗಳೂರಿನಲ್ಲಿ ಲಾರಿ ಕಂಡಕ್ಟರ್ ಆಗಿ ಕೆಲಸಕ್ಕೇ ಸೇರಿಕೊಂಡರು. ಕಾಲಘಟ್ಟ ಕಳೆಯುತ್ತಿದ್ದಂತೆ ದುಡಿಮೆ ಸಾಲದೆ ಲಾರಿ ಡ್ರೈವರ್ ಆಗಿ ಕೆಲಸವನ್ನು ಪ್ರಾರಂಭಿಸಿದರು. ಇದರಲ್ಲೇ ಕೆಲಸವನ್ನು ಮಾಡುತ್ತಾ ಕಷ್ಟಸುಖಗಳನ್ನು ಸಂಭಾಳಿಸಿಕೊಂಡು ಹೋಗುತ್ತಿದ್ದ ದಿನಗಳಲ್ಲಿ 2022 ನವೆಂಬರ್ 7ನೇ ತಾರೀಕಿನಂದು ಬೆಳಗಿನ ಜಾವ 8 ಗಂಟೆಗೆ ಮರದ ದಿಮ್ಮಿಗಳನ್ನು ಸಾಗಿಸುವ ಲಾರಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿ ಇಳಿಯುವಾಗ ಆಯಾ ತಪ್ಪಿ ಕೆಳಗೆಬಿದ್ದು ಅಪಘಾತಕ್ಕೆ ಒಳಗಾದರು. ತದನಂತರ ಪ್ರಾಥಮಿಕ ಚಿಕಿತ್ಸೆಗಾಗಿ ಹಾಸನದ ಸರಕಾರಿ ಆಸ್ಪತ್ರೆಗೆ ದಾಖಲಿಸಿದಾಗ ಇಲ್ಲಿ ಚಿಕಿತ್ಸೆ ಮುಂದುವರಿಸಲು ಸಾಧ್ಯವಾಗುದಿಲ್ಲ ಎಂದು ತಿಳಿದು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ಬಂದರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಅವರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ವಿಷಯ ತಿಳಿಸಿದರು. ಇನ್ನು ಮುಂದೆ ನಡೆದಾಡಲು ಸಾಧ್ಯವಿಲ್ಲ ಹಾಗೂ ಗಾಲಿಕುರ್ಚಿಯ ಮುಖಾಂತರ ಮಾತ್ರ ಚಲಿಸಲು ಸಾಧ್ಯವೆಂದು ಮನವರಿಕೆ ಮಾಡಿದರು. 26 ದಿನಗಳ ಕಾಲ ಆಸ್ಪತ್ರೆಯಲ್ಲಿಯೇ ಇದ್ದು ಚಿಕಿತ್ಸೆಯನ್ನು ಪಡೆದುಕೊಂಡರು.

ಚಿಕಿತ್ಸೆಯನ್ನು ಪಡೆದ ನಂತರ ಡಾ. ಮೃನಾಲ್ ಎಲ್.ಶೆಟ್ಟಿ ಸಲಹೆಯಂತೆ ಸೌತಡ್ಕದ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್‌ರವರ ಪರಿಚಯವನ್ನು ಮಾಡಿಕೊಂಡರು. ಸೇವಾಧಾಮದಲ್ಲಿ 3 ತಿಂಗಳ ಕಾಲ ಪುನಶ್ಚೇತನವನ್ನು ಪಡೆದುಕೊಂಡು ಸೇವಾಭಾರತಿ ವತಿಯಿಂದ ವಾಕರ್ ಮತ್ತು ಗಾಲಿಕುರ್ಚಿಯನ್ನು ಪಡೆದು ಸಣ್ಣಪುಟ್ಟ ಕೆಲಸವನ್ನು ಮಾಡುತ್ತಾ ತನ್ನಜೀವನವನ್ನು ಸಾಗಿಸುತ್ತಿದ್ದಾರೆ. ಆರೋಗ್ಯದಲ್ಲಿ ಬಹಳಷ್ಟು ನಾನು ಚೇತರಿಸಿ ಕೊಂಡಿದ್ದೇನೆ ಎಂದು ಸಂತೋಷವನ್ನು ವ್ಯಕ್ತಪಡಿಸುತ್ತಾರೆ.

ಬೆನ್ನುಹುರಿ ಅಪಘಾತಕ್ಕೆ ಒಳಗಾಗಿದ್ದರೂ ಸಹ ಇನ್ನೊಬ್ಬರಿಗೆ ತಾನು ಭಾರವಾಗದೆ ಕೆಲಸವನ್ನು ಮಾಡುತ್ತ ತನ್ನ ಕಾಲಮೇಲೆ ತಾನೇ ನಿಂತುಕೊಳ್ಳಬಲ್ಲೆ ಎಂಬ ಧೈರ್ಯವನ್ನು ಮಾಡಿ 2023ರಲ್ಲಿ ಎಳನೀರು ವ್ಯಾಪಾರವನ್ನು ಮಾಡಲು ಪ್ರಾರಂಭಿಸಿದರು. ದಿನಕ್ಕೆ 700 –900 ಸಂಪಾದನೆಯನ್ನು ಮಾಡುತ್ತ ವ್ಯಾಪಾರವನ್ನು ಮಾಡುತ್ತಿದ್ದ ಸಂದರ್ಭದಲ್ಲಿ ಕೆಲವು ಅಡೆತಡೆಗಳಿಂದ ಎಳನೀರು ವ್ಯಾಪಾರವನ್ನು ಅರ್ಧಕ್ಕೆ ಕೈಬಿಟ್ಟಿದ್ದರು. ಇದೀಗ 15 ದಿನಗಳಿಂದ ಪುನಃ ಎಳನೀರು ವ್ಯಾಪಾರವನ್ನು ಪ್ರಾರಂಭಿಸಿ ಅಲ್ಪ – ಸ್ವಲ್ಪ ಸಂಪಾದನೆಯನ್ನು ಮಾಡುತ್ತ ತನ್ನ ಜೀವನವನ್ನು ಸಾಗಿಸುತ್ತಾ ಎಲ್ಲರಿಗೂ ಮಾದರಿಯಾಗುವಂತೆ ಜೀವನವನ್ನು ವಿಜಯಪಥದ ಕಡೆಗೆ ಕೊಂಡೊಯ್ಯುತ್ತಿದ್ದಾರೆ.